ಮೆರವಣಿಗೆ ಶಾಲೆಯ ಬಳಿ ಬಂದ ತಕ್ಷಣ ಗೋಪಾಲಗೌಡ ಮತ್ತು ಅವನ ಒಂದಿಬ್ಬರು ಗೆಳೆಯರು ಪರೀಕ್ಷೆ ಬಿಟ್ಟು ಹೊರಗೋಡಿ ಮೆರವಣಿಗೆ ಸೇರಿಕೊಂಡರು.

ಕ್ವಿಟ್ ಇಂಡಿಯಾ ಚಳುವಳಿಯ ಕಾಲದ ಭೂಗತ ಚಳುವಳಿಗಾರರಂತೆ ಗೋಪಾಲಗೌಡನೂ ಬ್ರಿಟಿಷ್ ಸರ್ಕಾರವನ್ನು ವಿರೋಧಿಸಿ ಪೋಸ್ಟ್ ಡಬ್ಬ ಎತ್ತಿಕೊಂಡು ಹೋಗಿ ಕೆರೆಗೆ ಎಸೆದ; ಪೊಲೀಸರ ಬಂಧಿಯಾದ. 1942ರಲ್ಲಿ ಶಿವಮೊಗ್ಗ ಜೈಲಿನಲ್ಲಿ ಬಾಲ ಖೈದಿಯಾಗಿದ್ದ. ನಂತರ 'ಸೋಷಲಿಸಂ ಇನ್ ಎ ಟೆಸ್ಟ್ ಟ್ಯೂಬ್', ಕಮಲಾದೇವಿ ಚಟ್ಟೋಪಾಧ್ಯಾಯ ಅನುವಾದಿಸಿದ ಜೆ.ಪಿ.ಯವರ 'ಸಾಮ್ಯವಾದವೇ ಏಕೆ?' ಪುಸ್ತಕಗಳನ್ನು ಓದಿದ ಗೋಪಾಲಗೌಡ ಸಮಾಜವಾದಿ ರಾಜಕಾರಣದತ್ತ ಆಕರ್ಷಿತನಾದ.

ಸಂತೇರಿ ಮನೆಯ ಗೋಪಾಲಗೌಡ ಸಂತೇರಿಯನ್ನೇ ಶಾಂತವೇರಿಯನ್ನಾಗಿಸಿಕೊಂಡು ಶಾಂತವೇರಿ ಗೋಪಾಲಗೌಡರಾದರು. 1946ರ ಹೊತ್ತಿಗೆ ಕಾಂಗ್ರೆಸ್ ಸೋಷಲಿಸ್ಟ್ ಪಕ್ಷ ಸೇರಿದರು. ದೇಶಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರು ಮಹಾರಾಜರು ಅಧಿಕಾರ ಬಿಟ್ಟುಕೊಡದೆ ಜವಾಬ್ದಾರಿ ಸರ್ಕಾರ ರಚನೆಗೆ ಅಡ್ಡಿಯಾದರು; ಅರಸೊತ್ತಿಗೆಯ ವಿರುದ್ಧ ನಡೆದ ಚಳುವಳಿಯಲ್ಲಿ ಗೋಪಾಲಗೌಡರು ಭೂಗತ ಹೋರಾಟದಲ್ಲಿ ಭಾಗಿಯಾದರು.



ಗೋಪಾಲಗೌಡರ ರಾಜಕಾರಣದ ಮೂಲಕವೂ ಕರ್ನಾಟಕಕ್ಕೆ ಚಿರಪರಿಚಿತರಾದ ರಾಮಮನೋಹರ ಲೋಹಿಯಾ ಕರ್ನಾಟಕ ರಾಜಕಾರಣದ ಮಹತ್ವದ ಅಧ್ಯಾಯವೊಂದಕ್ಕೆ ನಾಂದಿ ಹಾಡಿದರು; ಲೋಹಿಯಾ ವ್ಯಕ್ತಿತ್ವ, ಚಿಂತನೆ, ಕ್ರಿಯೆಗಳು ಕನ್ನಡ ಸಾಹಿತ್ಯ, ಸಂಸ್ಕೃತಿ, ಚಳುವಳಿಗಳ ದಿಕ್ಕನ್ನು ನಿರ್ಣಾಯಕವಾಗಿ ಬದಲಿಸಿದ್ದು ಈಗ ಇತಿಹಾಸ.

ಲೋಹಿಯಾ ಕಾಗೋಡಿಗೆ ಬರುವ ಹೊತ್ತಿಗೆ ಸ್ಕೂಲ್ ಟೀಚರ್ ಗಣಪತಿಯಪ್ಪನವರು ಆರಂಭಿಸಿದ್ದ ಗೇಣಿದಾರರ ಹೋರಾಟ ಸಮಾಜವಾದಿ ಪಕ್ಷದ ಪ್ರವೇಶದೊಂದಿಗೆ ಸಂಘರ್ಷದ ಘಟ್ಟ ಮುಟ್ಟಿತ್ತು.

ಗೇಣಿದಾರರ ಹೋರಾಟದ ಹಿಂದೆ ಬಡರೈತರ ದಶಕಗಳ ನೋವುಗಳಿದ್ದವು:

ಜಮೀನ್ದಾರರ ಜಮೀನಿನಲ್ಲಿ ಉಳುತ್ತಿದ್ದ ಗೇಣಿದಾರರು ತಾವು ಬೆಳೆದ ಭತ್ತದ ಒಂದು ಪಾಲನ್ನು ಒಡೆಯರಿಗೆ ಗೇಣಿ ಕೊಡುತ್ತಿದ್ದರು. ಈ ನಡುವೆ ಭತ್ತ ಅಳೆಸಿ ತೆಗೆದುಕೊಳ್ಳುವ ಕೊಳಗದಲ್ಲಿ ಜಮೀನ್ದಾರರು ಮೋಸ ಮಾಡುತ್ತಿರುವುದು ಗೇಣಿದಾರರ ಅರಿವಿಗೆ ಬಂತು. ಗೇಣಿ ವಸೂಲಿಯ ಕ್ರೌರ್ಯ ಗೇಣಿದಾರರನ್ನು ಸಿಟ್ಟಿಗೆಬ್ಬಿಸುತ್ತಿತ್ತು. ಗೇಣಿದಾರರ ಹೆಂಡತಿಯರು ಜಮೀನ್ದಾರರ ಮನೆಗಳಲ್ಲಿ ಬಿಟ್ಟಿ ಚಾಕರಿ ಮಾಡಬೇಕಾಗಿತ್ತು. ದೀವರ ಗಂಡಸರು, ಹೆಂಗಸರು ಉಡುವ ಬಟ್ಟೆ, ನಿಲ್ಲುವ ರೀತಿ ಎಲ್ಲದರ ಬಗೆಗೂ ಜಮೀನ್ದಾರರ ಫರ್ಮಾನುಗಳಿದ್ದವು. ಈ ವಿವರಗಳನ್ನು, ಗಣಪತಿಯಪ್ಪನವರು ದೀವರನ್ನು ಸಂಘಟಿಸಿ ನಡೆಸಿದ ಹೋರಾಟವನ್ನು, ನಾ. ಡಿಸೋಜರ 'ಕೊಳಗ' ಕಾದಂಬರಿ ದಾಖಲಿಸಿದೆ.

ಹಲವು ಕಾರಣಗಳು ಒಗ್ಗೂಡಿದ್ದ ಗೇಣಿದಾರರ ಹೋರಾಟದಲ್ಲಿ ರೈತರು, ರೈತ ಮಹಿಳೆಯರು, ಸಮಾಜವಾದಿಗಳು ಬಂಧನಕ್ಕೊಳಗಾಗಿದ್ದರು. 1951ರ ಮೇ 9ರಂದು ರೈತರು ಗೇಣಿ ಜಮೀನಿನಲ್ಲಿ ಬಿತ್ತನೆ ಮಾಡಲು ಹೋದಾಗ ಅವರನ್ನು ಬಂಧಿಸಲಾಯಿತು; ತಮ್ಮ ಜಮೀನಿನಲ್ಲಿ ಗೇಣಿದಾರರು ಬೆಳೆದಿದ್ದ ಬೇಸಿಗೆ ಫಸಲನ್ನು ಕೆಲವು ಜಮೀನ್ದಾರರು ಹಾಳು ಮಾಡಿದ್ದೂ ಆಯಿತು.

'ರೈತರ ಹಕ್ಕುಗಳನ್ನು ವಾಪಸು ಪಡೆಯುವ ಉದ್ದೇಶದಿಂದ ಸೋಷಲಿಸ್ಟ್ ಪಕ್ಷ ಮೇ 16ರಂದು ಕಾಗೋಡು ಗ್ರಾಮದಲ್ಲಿ ಸತ್ಯಾಗ್ರಹ ಆರಂಭಿಸುವುದಾಗಿ' ಮೈಸೂರು ರಾಜ್ಯ ಸೋಷಲಿಸ್ಟ್ ಪಕ್ಷದ ಅಧ್ಯಕ್ಷರಾಗಿದ್ದ ಸಿ.ಜಿ.ಕೆ. ರೆಡ್ಡಿ ಒಳಾಡಳಿತ ಸಚಿವರಿಗೆ ಪತ್ರ ಬರೆದರು. ಸಮಾಜವಾದಿಗಳ ಪ್ರವೇಶದ ನಂತರ ಕಾಗೋಡು ಸತ್ಯಾಗ್ರಹಕ್ಕೆ 'ಉಳುವವನೇ ಹೊಲದೊಡೆಯ' ತಾತ್ವಿಕ ಘೋಷಣೆಯೂ ಸೇರಿಕೊಂಡಿತು. ಗೋಪಾಲಗೌಡರ ಬದುಕು–ಹೋರಾಟಗಳನ್ನು ಕುರಿತು ಕೋಣಂದೂರು ವೆಂಕಪ್ಪ ಸಂಪಾದಿಸಿದ 'ಜೀವಂತ ಜ್ವಾಲೆ' ಆ ಕಾಲದ ಚಾರಿತ್ರಿಕ ವಿವರಗಳನ್ನು ಮೊದಲ ಬಾರಿಗೆ ದಾಖಲು ಮಾಡಿತು.

ಲೋಹಿಯಾ ಬೆಂಗಳೂರು ತಲುಪಿದ ದಿನವೇ ಸಿ.ಜಿ.ಕೆ. ರೆಡ್ಡಿಯವರನ್ನು ಪೊಲೀಸರು ಸಾಗರ ರೈಲ್ವೇ ನಿಲ್ದಾಣದಲ್ಲಿ ಬಂಧಿಸಿದರು. ಈ ಕಾಲದ ದಾಖಲೆಗಳು 'ಪ್ರಜಾವಾಣಿ'ಯ ಸಂಚಿಕೆಗಳಲ್ಲಿವೆ:

ಲೋಹಿಯಾ ಸಾಗರದಿಂದ ಕಾಗೋಡಿಗೆ ಬಂದಾಗ ಮಳೆಗಾಲ. ಕಾಗೋಡಿನಲ್ಲಿ ಸತ್ಯಾಗ್ರಹ ಶುರು ಮಾಡುವ ಮುನ್ನ ಲೋಹಿಯಾ ಕೊಟ್ಟ ಪತ್ರಿಕಾ ಹೇಳಿಕೆಯ ಸಾರಾಂಶ:

'ಈವರೆಗೆ ಕಾಗೋಡಿನಲ್ಲಿ 400 ಮಂದಿಯ ದಸ್ತಗಿರಿಯಾಗಿದೆ. ಅವರನ್ನು ಬಂಧಿಗಳೆಂದು ಪರಿಗಣಿಸಲಾಗಿಲ್ಲ. ಹೆಚ್ಚುಕಡಿಮೆ ಮೈಸೂರು ಸೋಷಲಿಸ್ಟ್ ಪಾರ್ಟಿಯ ಕಾರ್ಯಕರ್ತರೆಲ್ಲ ಜೈಲಿನಲ್ಲಿದ್ದಾರೆ. ಜೂನ್ ಐದನೇ ತಾರೀಕು ಕೈದಿಗಳನ್ನು ಹೊಡೆಯುವ ಕ್ರೂರ ಕೃತ್ಯ ಆರಂಭವಾಯಿತು. ಜೂನ್ ಆರನೇ ತಾರೀಕು ಕಾಗೋಡಿನಿಂದ ಸಾಗರಕ್ಕೆ ಹೊರಟ ಮೆರವಣಿಗೆಯ ಮೇಲೆ ಪೊಲೀಸರು ಲಾಠಿ ಚಾರ್ಜ್ ಮಾಡಿದಾಗ ಕೆಲವರಿಗೆ ಗಾಯಗಳಾಗಿವೆ. ಕೆಲವರನ್ನು ಹೊಡೆದು ಕಾಡಿಗೆ ಬಿಡಲಾಗಿದೆ. ಲಾಕಪ್‌ನಲ್ಲಿ ಆಹಾರ, ವಸತಿಗಳ ಪರಿಸ್ಥಿತಿ ಅಮಾನುಷವಾಗಿದೆ. ಆಹಾರದ ಅಭಾವವಿರುವ ಈ ಕಾಲದಲ್ಲಿ ಸುಮಾರು ಇನ್ನೂರು ಎಕರೆ ಭೂಮಿಯನ್ನು ಬೀಳುಬಿಡುವುದು ಸರಿಯಲ್ಲ. ಉಚ್ಚಾಟನೆಯಾದ ರೈತರಿಗೆ ರಕ್ಷಣೆ ನೀಡುವ ಭೂನೀತಿಯ ಅಗತ್ಯವಿದೆ. ರೈತ ಚಳುವಳಿಯ ಕಾರಣಗಳ ಬಗ್ಗೆ ವಿಚಾರಣೆಯಾಗಬೇಕು.'

ಈ ಹೇಳಿಕೆ ಕೊಟ್ಟ ಲೋಹಿಯಾ, ಕಾಗೋಡು ಚಳುವಳಿಗಾರರಿಗೆ ಸರ್ಕಾರ ನ್ಯಾಯ ಒದಗಿಸಿಕೊಡುವ ಯತ್ನ ನಡೆಸದಿದ್ದರೆ ತಾವು ಸತ್ಯಾಗ್ರಹದಲ್ಲಿ ಭಾಗವಹಿಸುವುದಾಗಿ ಹೇಳಿದರು. ಸರ್ಕಾರದಿಂದ ಪ್ರತಿಕ್ರಿಯೆ ಬರಲಿಲ್ಲ.

14 ಜೂನ್ 1951. ಸೋಷಲಿಸ್ಟ್ ಪಕ್ಷದ ಬಾವುಟ ಹಿಡಿದ ರೈತರು, ಸಮಾಜವಾದಿ ನಾಯಕರು ಲೋಹಿಯಾ ಜೊತೆಗೆ ಹೊರಟರು; ಗೇಣಿದಾರರನ್ನು ಒಕ್ಕಲೆಬ್ಬಿಸಿದ್ದ ಗೌಡರ ಗದ್ದೆ ತಲುಪಿದರು.

ಆ ಸಂದರ್ಭವನ್ನು ಸಿ.ಬಿ. ಚಂದ್ರಶೇಖರ್ ಅವರ 'ಕಾಗೋಡು: ಒಂದು ನೆನಪು' ಪುಸ್ತಕ ದಾಖಲಿಸುತ್ತದೆ:

'ಅವತ್ತು ಸರ್ಕಾರ ವಿಶೇಷ ಪೊಲೀಸ್ ಪಡೆಯನ್ನು ಕರೆಸಿತ್ತು. ರಿಸರ್ವ್ ಪೊಲೀಸರು ಬಂದೂಕುಧಾರಿಗಳಾಗಿ ಒಡೆಯನ ಹೊಲಕ್ಕೆ ಅಡ್ಡಗೋಡೆಯಂತೆ ನಿಂತಿದ್ದರು. ಪೊಲೀಸರನ್ನು ಲೋಹಿಯಾ ಗಣನೆಗೆ ತೆಗೆದುಕೊಳ್ಳಲಿಲ್ಲ. ಪ್ರತಿಬಂಧಕಾಜ್ಞೆಯನ್ನೂ ಲೆಕ್ಕಿಸಲಿಲ್ಲ. ರೈತ ಸಮುದಾಯವನ್ನು ಉದ್ದೇಶಿಸಿ ಅವರು ಹೇಳಿದರು:

'ನಿಮ್ಮ ಹೋರಾಟ ನ್ಯಾಯಕ್ಕಾಗಿ ನಡೆಯುತ್ತಿರುವ ಹೋರಾಟ. ಇದು ಕೇವಲ ನಿಮ್ಮ ಉಳುಮೆಯ ಹಕ್ಕನ್ನು ರಕ್ಷಿಸಿಕೊಳ್ಳಲು ನಡೆಯುತ್ತಿರುವ ಹೋರಾಟವಲ್ಲ. ಇದು ಉಳುಮೆಯ ಹಕ್ಕನ್ನು ನಿಮಗೆ ನೀಡಿರುವ 1879ನೇ ಇಸವಿಯ ಗೇಣಿ ಕಾನೂನನ್ನು ರಕ್ಷಿಸಲು